ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 27-10-2015

# ಪತ್ರಿಕಾ ಪ್ರಕಟಣೆ

## ಸಾಮಾಜಿಕ ಅವಮಾನದಿಂದ ಹೊರಬರುವ ಪ್ರತಿಯೊಂದು ಪ್ರಯತ್ನವೂ ಒಂದು ಸಾಧನೆ- ಬರಗೂರು ರಾಮಚಂದ್ರಪ್ಪ

ಬೆಂಗಳೂರು, ಅಕ್ಟೋಬರ್ 27 (ಕರ್ನಾಟಕ ವಾರ್ತೆ)

ನಮ್ಮ ದೇಶದಲ್ಲಿ ಇಂದಿಗೂ ಜಾತಿ ಹೆಸರಿನಲ್ಲಿ ದೇವಾಲಯಗಳ ಒಳಗೆ ಪ್ರವೇಶ ನಿಷೇದಿಸುವುದು, ದಲಿತ ನಾಯಕರು ಪ್ರವೇಶಿಸಿದ ಧಾರ್ಮಿಕ ಸ್ಥಳಗಳನ್ನು ಶುದ್ಧೀಕರಣಗೊಳಿಸುವಂತಹ ಕೊಳಕು ಸಂಸ್ಕೃತಿ ಸಾಮಾಜಿಕ ಅವಮಾನದ ಸಂಗತಿಯಾಗಿದೆ. ಈ ಸಾಮಾಜಿಕ ಅವಮಾನದಿಂದ ಹೊರಬರಲು ಮಾಡುವ ಸಣ್ಣ ಕೆಲಸವಾದರೂ ಶೋಷಿತ ಜನಾಂಗಕ್ಕೆ ಅದೊಂದು ದೊಡ್ಡ ಸಾಧನೆ ಎಂದು ಹಿರಿಯ ಸಾಹಿತಿ, ವಿಚಾರವಾದಿ ಹಾಗೂ 2015-16 ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಅಭಿಪ್ರಾಯಪಟ್ಟರು.

ಇಂದು ವಿಧಾನ ಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಅವರು ಜಾತಿ ಸಾಮಾಜಿಕ ವಾಸ್ತವ, ಆದರೆ ಜಾತಿ ವಾದ ಅಲ್ಲ. ಇಂದಿನ ನಾಯಕರು ಜಾತಿವಾದ, ಧರ್ಮ, ಪಕ್ಷಗಳನ್ನು ಮೀರಿ ಆಲೋಚಿಸುವ ನಾಯಕರಾಗಬೇಕೇ ವಿನಹ ತನ್ನ ಜಾತಿಯೇ ಶ್ರೇಷ್ಠ ಎಂಬ ಮನೋಭಾವ ಇಟ್ಟುಕೊಳ್ಳಬಾರದು ಎಂದರು. ಜಾತಿಯೊಳಗೆ ಶ್ರೇಣೀಕರಣ ಸಮಾಜದ ಅಸಹನೆಗೆ ಕಾರಣ ಎಂದರು.

ನಮ್ಮ ನಾಡಿನ ಶ್ರೇಷ್ಠ ನಾಯಕರುಗಳು ಅವರ ಜಾತಿಗಳಿಗೆ ಸೀಮಿತವಾಗದೆ ಸಮಾಜದ ಎಲ್ಲ ವರ್ಗಗಳೂ ಅನುಸರಿಸುವಂತಹ ತತ್ವಗಳನ್ನು ಹೇಳಿಹೋಗಿದ್ದಾರೆ. ಆದರೆ ಇಂದು ಜಾತಿಗಳು ಮತ ಬ್ಯಾಂಕ್ ಆಗಿವೆ ಹಾಗೂ ಜಯಂತಿಗಳು ಜಾತಿ ಜಯಂತಿಗಳಾಗಿವೆ ಎಂದು ವಿಷಾಧ ವ್ಯಕ್ತಪಡಿಸಿದರು. ಒಬ್ಬ ಶೋಷಿತ ತನಗಿಂತ ಶೋಷಿತನಾದವನ ಏಳಿಗೆಯ ಬಗ್ಗೆ ಯೋಜನೆ ಮಾಡದಿದ್ದರೆ ಜಾತಿ ಹಾಗೂ ಸಾಮಾಜಿಕ ಶೋಷಣೆಗೆ ಕೊನೆ ಇರುವುದಿಲ್ಲ ಎಂದು ಹೇಳಿದರು.

ಶೋಷಿತ ಜನಾಂಗಕ್ಕೆ ತನ್ನದೆ ಆದ ಪರಂಪರೆ ಹಾಗೂ ಚರಿತ್ರೆ ಇಲ್ಲ ಎಂದು ಹೇಳಲಾಗಿದೆ. ಹಾಗಾಗಿ ತಮ್ಮೊಳಗೆ ಇದ್ದಂತಹ ಸಾಧಕರನ್ನೆ ಆಯ್ಕೆ ಮಾಡಿಕೊಳ್ಳುತ್ತಿರುವುದು ಆಗಲೇಬೇಕಾದ ಸಾಮಾಜಿಕ ಬೆಳವಣಿಗೆ

ಎಂದ ಅವರು ತಮ್ಮ ಜನಾಂಗದ  ಸಾಧಕರ, ನಾಯಕರ ಜಯಂತಿಗಳನ್ನು ಆಚರಿಸುವಾಗ ತಮ್ಮ ಜಾತಿಗೇ ಮಾತ್ರ ಅವರನ್ನು ಸೀಮಿತಗೊಳಿಸದೆ ಸಾಂಸ್ಕೃತಿಕ  ಸಾಮಾಜಿಕ ಜಯಂತಿಯನ್ನಾಗಿ ಆಚರಿಸಬೇಕು ಎಂದು ಕಿವಿಮಾತು ಹೇಳಿದರು.  ಈಗಿನ ನಾಯಕರು ಭರತನಿಂದ ರಾಜಕೀಯವನ್ನು ಶಬರಿಯಿಂದ ಸಹನೆ ಸಂಸ್ಕೃತಿಯನ್ನು ಕಲಿಯಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ವಾಲ್ಮೀಕಿ ರಾಮಾಯಣದ ಅಪವ್ಯಾಖ್ಯಾನಗಳನ್ನು ತಪ್ಪಿಸಬೇಕಾದರೆ ರಾಜ್ಯ ಸರ್ಕಾರವು ಕನಕ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ ವಾಲ್ಮೀಕಿ ಕೃತಿಗಳಲ್ಲಿರುವ ಸಾಹಿತ್ಯಿಕ ಶಾಸ್ತ್ರದೊಂದಿಗೆ ಮಾನವೀಯ ಶಾಸ್ತ್ರದ ದೃಷ್ಟಿಕೋನದಲ್ಲಿ ಸಹ  ಅಧ್ಯಯನ ಮಾಡುವಂತಾಗಬೇಕು. ಇದರಿಂದ ಮುಂದಿನ  ಜನಾಂಗಕ್ಕೆ  ಒಳ್ಳೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿವೇಕ ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಸಮಾರಂಭದಲ್ಲಿ 2015–16 ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪಡೆದ ಡಾ: ಕೆ. ನಾಗರತ್ನಮ್ಮ ಅವರನ್ನು ಬರಗೂರು ರಾಮಚಂದ್ರಪ್ಪ ಅವರು ಅಭಿನಂದಿಸಿದರು.

ವಿಧಾನ ಪರಿಷತ್ ಸದಸ್ಯರಾಗಿರುವ ಉಗ್ರಪ್ಪ ಅವರು ಇದೇ ಸಂದರ್ಭದಲ್ಲಿ ಮಾತನಾಡಿ ವಾಲ್ಮೀಕಿ ರಾಮಾಯಣದಲ್ಲಿ ಒಂದು ಮಹತ್ತರ ಸಂದೇಶವಿದೆ.  ಅದೇನೆಂದರೆ,  ಮಹಿಳೆಯರ ಶೋಷಣೆ ಮಾಡಿದವರು ಸಾಯಬೇಕು ಅಥವಾ ಸೋಲಬೇಕು.  ಇದನ್ನು ರಾಮಾಯಣದಲ್ಲಿ ಬರುವ ವಾಲಿ, ರಾವಣ ಹಾಗೂ ರಾಮ ಕೂಡ ವಿವಿಧ ಹಂತಗಳಲ್ಲಿ ಅನುಭವಿಸುತ್ತಾರೆ ಎಂದು ಹೇಳಿದರು.  ವಾಲ್ಮೀಕಿಯನ್ನು  ಸಾಂಸ್ಕೃತಿಕ ನಾಯಕರನ್ನಾಗಿಸಲು ಎಲ್ಲರೂ ಪ್ರಯತ್ನಪಡಬೇಕು ಎಂದ ಅವರು ವಿಧಾನ ಸೌಧದ ಆವರಣದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿಯನ್ನು ಸ್ಥಾಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಿಂತನೆ ನಡೆಸಿದ್ದಾರೆ ಎಂದು ತಿಳಿಸಿದರು.

ಪ್ರಶಸ್ತಿ ಪಡೆದ ಡಾ: ಕೆ. ನಾಗರತ್ನ ಅವರು ಮಾತನಾಡಿ ವಾಲ್ಮೀಕಿ ರಚಿತ ಹಲವಾರು ಪಾತ್ರಗಳನ್ನು ತಮ್ಮ ನಾಟಕಗಳಲ್ಲಿ ಪ್ರದರ್ಶಿಸಿದ್ದು ಇಂದು ವಾಲ್ಮೀಕಿ ಪ್ರಶಸ್ತಿಯನ್ನೇ ಪಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು.  ಕಲೆಗೆ ನಿವೃತ್ತಿ ಇಲ್ಲ ಎಂದ ಅವರು ತನ್ನ ಕೊನೆಯುಸಿರಿನವರೆಗೆ ಕಲಾಸೇವೆ ಮಾಡಲು ಬಯಸುವುದಾಗಿ ಹೇಳಿದರು.

2015–16 ನೇ ಸಾಲಿನ ವಾಲ್ಮೀಕಿ ಪ್ರಶಸ್ತಿಯನ್ನು  ಹಿರಿಯ ರಂಗ ಕಲಾವಿದೆ ಕೆ. ನಾಗರತ್ನಮ್ಮ ಅವರಿಗೆ ಇಂದು  ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ಪ್ರದಾನ ಮಾಡಿದರು.   ಪ್ರಶಸ್ತಿಯು 5 ಲಕ್ಷ ರೂ. ನಗದು ಪ್ರಶಸ್ತಿ ಹಾಗೂ  ಚಿನ್ನದ ಪದಕ ಒಳಗೊಂಡಿದೆ.

ಮೂಲತ: ದೇವದಾಸಿ ಸಮಾಜದ ಹಿನ್ನೆಲೆಯಿಂದ ಬಂದಂತಹ ಡಾ: ಕೆ. ನಾಗರತ್ನಮ್ಮ ಅವರು ಆ ಪದ್ದತಿಯನ್ನು ದಾಟಿ ಕಲಾರಂಗದಲ್ಲಿ ಗೌರವಸ್ಥಾನ ಸೃಷ್ಟಿಸಿ ಅಂತಹ ಮಹಿಳೆಯರಿಗೆ  ರಂಗಭೂಮಿಯಲ್ಲಿ ವೃತ್ತಿವೇದಿಕೆ ಕಟ್ಟಿಕೊಡಲು ದುಡಿಯುತ್ತಾ ಬಂದಿದ್ದಾರೆ.

ಪ್ರಶಸ್ತಿ ಪ್ರದಾನ ಮಾಡಿದ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ಮಾತನಾಡಿ ವಾಲ್ಮೀಕಿ ಪುತ್ಥಳಿ ಪ್ರತಿಷ್ಠಾಪನೆ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ಈಗಾಗಲೇ ಸೂಚನೆ ನೀಡಿದ್ದಾರೆ ಎಂದ ಅವರು ವಾಲ್ಮೀಕಿ ಅಧ್ಯಯನ ಕೇಂದ್ರ ಸ್ಥಾಪನೆ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಲಾಗುವುದೆಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಡಾ: ನಾಗರತ್ನಮ್ಮ ಅವರ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಿದ್ಧಪಡಿಸಿದ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಡಾ: ಅನಸೂಯ ಎಸ್. ಕೆಂಪನಹಳ್ಳಿ ಅವರು ರಚಿಸಿದ ಹುತ್ತದೊಳಗಣ ಚಿತ್ತ ಎಂಬ ವಾಲ್ಮೀಕಿ ಕುರಿತ ಕೃತಿಯನ್ನು ಸಮಾಜ ಕಲ್ಯಾಣ ಸಚಿವರು ಬಿಡುಗಡೆ ಮಾಡಿದರು. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವಾರ್ಷಿಕ ಕ್ರಿಯಾ ಯೋಜನೆ ಬಿಡುಗಡೆ ಮಾಡಲಾಯಿತು.

ವಾಲ್ಮೀಕಿ ಸಮಾಜಕ್ಕೆ ಸೇರಿದ 10 ನೇ ತರಗತಿಯಲ್ಲಿ ಹೆಚ್ಚು ಅಂಕಗಳಿಸಿದ ಮಕ್ಕಳಿಗೆ ತಲಾ 5 ಲಕ್ಷ ರೂ.ಗಳ ಚೆಕ್ ಹಾಗೂ ಪಾರಿತೋಷಕವನ್ನೂ ಒಳಗೊಂಡಂತಹ ಪ್ರತಿಭಾ ಪುರಸ್ಕಾರ ನೀಡಲಾಯಿತು. ಅಲ್ಲದೆ ವಿವಿಧ ಮಹಿಳಾ ಸಂಘಗಳಿಗೆ ಸಹಾಯಧನವನ್ನೂ ವಿತರಿಸಲಾಯಿತು. ಸಮಾರಂಭಕ್ಕೂ ಮುನ್ನ ನಗರದ ಬಸವೇಶ್ವರ ವೃತ್ತದಿಂದ ವಿಧಾನ ಸೌಧದ ವರೆಗೆ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ಸಮಾರಂಭದಲ್ಲಿ ಹರಿಹರ ತಾಲ್ಲೂಕಿನ ಶ್ರೀ ವಾಲ್ಮೀಕಿ ಗುರುಪೀಠದ ಜಗದ್ಗುರುಗಳಾದ ಪ್ರಸನ್ನಾನಂದ ಪುರಿ ಸ್ವಾಮಿಗಳು, ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಗಳಾದ ಶ್ರೀ ಗಂಗಾರಾಂ ಬಡೇರಿಯಾ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕರಾದ ಶ್ರೀ ಪಿ. ವಸಂತಕುಮಾರ್ ಮತ್ತಿತರ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಪಲ್ಲವಿ/ಕೆಎಂ